**ಪಿ.ಸಿ. ನಂಬ್ರ:140/2026** **ಪ್ರಾಸಾ: 1**

ದಿನಾಂಕ: 02-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ:**

ನಾನು ಈ ಕೇಸಿನ ಪಿರ್ಯಾದಿ ಆಗಿದ್ದು ನನ್ನ ಪ್ರಮಾಣ ಪತ್ರವನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದನ್ನು ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ. ಅದರಲ್ಲಿರುವ ವಿಷಯಗಳೆಲ್ಲ ನನ್ನ ತಿಳುವಳಿಕೆ ಮಟ್ಟಿಗೆ ಸತ್ಯವಾಗಿರುತ್ತದೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನನ್ನ ಪ್ರಮಾಣೀಕೃತ ಹೇಳಿಕೆಯನ್ನಾಗಿ ಪರಿಗಣಿಸಬೇಕಾಗಿ ಕೇಳಿಕೊಳ್ಳುತ್ತೇನೆ. ನಾನು ಈ ಕೆಳಕಂಡ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

1. ಆರೋಪಿ ನನಗೆ ನೀಡಿರುವ ಚೆಕ್ ನ್ನು ಹಾಜರುಪಡಿಸಿದ್ದು ಅದನ್ನು ನಿಸಿ-1 ಎಂದು ಗುರುತಿಸಲಾಯಿತು.

2. ಚೆಕ್ ಅಮಾನ್ಯಗೊಂಡ ಬಗ್ಗೆ ಬ್ಯಾಂಕ್‌ನವರು ನೀಡಿದ ಮೆಮೋವನ್ನು ಹಾಜರುಪಡಿಸಿದ್ದು ಅದನ್ನು ನಿಸಿ-2 ಎಂದು ಗುರುತಿಸಲಾಯಿತು.

3. ಆರೋಪಿಗೆ ವಕೀಲರ ಮುಖಾಂತರ ಕಳುಹಿಸಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-3 ಎಂದು ಗುರುತಿಸಲಾಯಿತು.

4. ಸದರಿ ನೋಟಿಸು ಆರೋಪಿತನಿಗೆ ಕಳುಹಿಸಿದ ಬಗ್ಗೆ 2 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಸಿ-4 ಮತ್ತು 5 ಎಂದು ಗುರುತಿಸಲಾಯಿತು.

5. ಸದರಿ ನೋಟಿಸು ಆರೋಪಿಗೆ ಜಾರಿಯಾಗಿರುವ ಬಗ್ಗೆ 1 ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-6 ಎಂದು ಗುರುತಿಸಲಾಯಿತು.

6. ಸದರಿ ನೋಟಿಸು ಆರೋಪಿಗೆ ಜಾರಿಯಾಗದೇ ವಾಪಸ್ಸು ಬಂದಿರುವ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ 7 ಎಂದು ಗುರುತಿಸಲಾಯಿತು.

7. ಖಾಸಗಿ ದೂರನ್ನು ನಿಸಿ-8 ಎಂದು, ಸಾಕ್ಷಿ ಸಹಿಯನ್ನು ನಿಸಿ-8(ಎ) ಎಂದು ಗುರುತಿಸಲಾಯಿತು.

ಆರೋಪಿತನ ವಿರುದ್ದ ಕಾನೂನು ಕ್ರಮ ಕೈಗೊಳ್ಳಲು ಪ್ರಾರ್ಥನೆ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ. ಮಾಗಡಿ.**